# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

**ಸಿಸಿ ಸಂಖ್ಯೆ: 822/2017**

| | | |
|---|---|---|
| ಹೆಸರು | : | ನವೀನ |
| ತಂದೆಯ ಹೆಸರು | : | ಶಿವಪ್ಪ ಗೌಡ |
| ಫ್ರಾಯ | : | 36 ವರ್ಷ |
| ಉದ್ಯೋಗ | : | |
| ವಾಸ | : | ಮಚ್ಚಿನ ಗ್ರಾಮ, ಬೆಳ್ತಂಗಡಿ ತಾಲೂಕು |

ದಿನಾಂಕ **26.3.2024** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ **ಭೋಧಿಸಲಾಯಿತು.**

( ಸಾಕ್ಷಿ ಅಂಗವೈಕಲ್ಯ ಹೊಂದಿದ ಕಾರಣ ನಿಲ್ಲಲು ಸಾಧ್ಯವಿಲ್ಲ, ಕುಳಿತು ಸಾಕ್ಷ್ಯ ಹೇಳಲು ಅನುವು ಮಾಡಿಕೊಡಬೇಕು ಎಂದು ಕೋರಿದ ಮೇರೆಗೆ ಅನುವು ಮಾಡಿಕೊಡಲಾಯಿತು)

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ದಿಃ 8.6.2017 ರಂದು ನಾನು ಬಳಂಜೆಯಿಂದ ಮನೆಗೆ ಬೈಕ್ ಸಂಃ ಕೆಎ-19-ಎಲ್-3511 ರಲ್ಲಿ ಬರುವಾಗ ನನ್ನ ಜೊತೆ ಮೃತ ಪ್ರಶಾಂತ್ ಮತ್ತು ಚಾಸಾ3 ರವರು ಅವರ ಬೈಕಿನಲ್ಲಿ ಬರುತ್ತಿದ್ದರು. ಅಲ್ಲದೆ ಚಾಸಾ1 ರವರು ಸಹ ಬೈಕಿನಲ್ಲಿ ಬರುತ್ತಿದ್ದರು. ಹಾಗೆ ನಾವು ರೇಷ್ಮೆ ರಸ್ತೆಯಿಂದ ಸ್ವಲ್ಪ ಮುಂದೆ ಕಣಗೋಡಿ ಎಂಬಲ್ಲಿ ರಸ್ತೆಯ ಎಡಭಾಗದಲ್ಲಿ ಬರುತ್ತಿರುವಾಗ ಎದುರಿನಿಂದ ಅಂದರೆ ಉಪ್ಪಿನಂಗಡಿ ಕಡೆಯಿಂದ ಒಂದು ಕಾರು ಅತಿವೇಗ ಮತ್ತು ನಿರ್ಲಕ್ಷ್ಯತನದಿಂದ ಬಂದು ನಾನು ಹೋಗುತ್ತಿದ್ದಾಗ ಎಡಬದಿಗೆ ಬಂದು ಡಿಕ್ಕಿ ಹೊಡೆದಿರುತ್ತದೆ. ಆಗ ನನ್ನ ಕಾಲಿಗೆ ಗಾಯ ಆಗಿರುತ್ತದೆ. ಡಿಕ್ಕಿ ಹೊಡೆದ ಕಾರು ಹೋಗಿ ಹೊಂಡಕ್ಕೆ ಬಿದ್ದಿರುತ್ತದೆ. ಅಲ್ಲದೆ ನನ್ನ ಹಿಂದೆ ಬರುತ್ತಿದ್ದ ಚಾಸಾ3 ರವರು ಚಲಾಯಿಸುತ್ತಿದ್ದ ಬೈಕಿಗೂ ಸಹ ಡಿಕ್ಕಿ ಹೊಡೆದಿರುತ್ತದೆ. ಆಗ ಕಾರಿನ ಚಾಲಕ ಗಾಡಿಯನ್ನು ಬಿಟ್ಟು ಓಡಿಹೋಗಿರುತ್ತಾರೆ. ಕಾರಿನ ಚಾಲಕ ನಮ್ಮನ್ನು ಆಸ್ಪತ್ರೆಗೆ ದಾಖಲಿಸಬೇಕಾಗಿತ್ತು, ಆದರೆ ದಾಖಲಿಸದೇ ಓಡಿಹೋಗಿರುತ್ತಾರೆ. ನನ್ನನ್ನು ಚಾಸಾ1 ರವರು ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿರುತ್ತಾರೆ. ನಂತರ ನನ್ನನ್ನು ಮಂಗಳೂರು ಎ.ಜೆ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ. ಅಪಘಾತ ಸಮಯದಲ್ಲಿ ಚಾಸಾ3 ರವರಿಗೆ ಗಾಯ ಆಗಿತ್ತು. ಮೃತ ಪ್ರಶಾಂತ್ ರವರ ಕಾಲು ಕಟ್ಟಾಗಿತ್ತು.

ಅವರನ್ನು ಮಂಗಳೂರು ಎ.ಜೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಎ.ಜೆ ಆಸ್ಪತ್ರೆಯಲ್ಲಿ ನನ್ನ ಕಾಲನ್ನು ಕಟ್ ಮಾಡಿರುತ್ತಾರೆ. 14 ನೇ ತಾರೀಖಿನಂದು ಪ್ರಶಾಂತ್ ರವರಿಗೆ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ ಎಂಬ ವಿಚಾರ ತಿಳಿದುಬಂದಿರುತ್ತದೆ. ಅಪಘಾತಕ್ಕೆ ಆರೋಪಿ ತನ್ನ ಕಾರನ್ನು ಅತಿವೇಗ ಮತ್ತು ನಿರ್ಲಕ್ಷತನದಿಂದ ಚಲಾಯಿಸಿರುವುದು ಕಾರಣವಾಗಿರುತ್ತದೆ. ಚಾಲಕನ ಹೆಸರು ಮೊಹಮ್ಮದ್ ಹರ್ಷದ್ ಎಂದು. ಅಪಘಾತವು ರಾತ್ರಿ 8.30 ಗಂಟೆಗೆ ಆಗಿರುತ್ತದೆ. ನನಗೆ ಅಪಘಾತಪಡಿಸಿದ ಚಾಲಕ ಮತ್ತು ಅಪಘಾತಪಡಿಸಿದ ವಾಹನದ ಛಾಯಾಚಿತ್ರ ನೋಡಿದರೆ ಗುರುತಿಸಬಲ್ಲೆ. 1 ನೇ ಆರೋಪಿ ಖುದ್ದು ವಿನಾಯಿತಿಗೆ ಅರ್ಜಿ ಸಲ್ಲಿಸಿರುವುದರಿಂದ ಆರೋಪಿಯನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿ ನಿಪಿ9 ರಿಂದ 12 ರಲ್ಲಿರುವ ಕಾರನ್ನು ನೋಡಿ ಗುರುತಿಸಿ ಅಪಘಾತಪಡಿಸಿದ ವಾಹನ ಎಂದು ತಿಳಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಮತ್ತು ಮರುಹೇಳಿಕೆ ಪಡೆದುಕೊಂಡಿರುತ್ತಾರೆ.

ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ. ಎನ್.ಎಸ್.ಎ ವಕೀಲರಿಂದಃ

ಘಟನೆಗೂ ಪೂರ್ವದಲ್ಲಿ ಎರಡು ದಿನಗಳ ಕಾಲ ನಾನು ಬಳಂಜೆ ಎಂಬ ಪ್ರದೇಶದಲ್ಲಿ ಕೆಲಸ ಮಾಡಿದ್ದೇನೆ. ನಾನು ಕೆಲಸವನ್ನು ಮುಗಿಸಿಕೊಂಡು ನಾನು ನಮ್ಮ ಮನೆ ಮಚ್ಚಿನ ಗ್ರಾಮದ ಲಾವದಪಲ್ಕೆಗೆ ಹೋಗುತ್ತಿದ್ದೆ. ಅಲ್ಲಿ ನಮ್ಮ ಮನೆ ಮಾತ್ರ ಇರುತ್ತದೆ ಘಟನೆಯಾಗುವಾಗ ಕತ್ತಲೆಯಾಗಿತ್ತು ಎಂದರೆ ಸರಿ. ಆ ಪ್ರದೇಶದಲ್ಲಿ ರಸ್ತೆ ಬದಿಯಲ್ಲಿ ದಾರಿದೀಪ ಇದ್ದವು. ನಾನೆ ಬೈಕನ್ನು 30 ರಿಂದ 35 ಕಿ.ಮೀ ವೇಗದಲ್ಲಿ ಚಲಾಯಿಸುತ್ತಿದ್ದೆ. ನಾನು ಸ್ಪ್ಲೇಂಡರ್ ಬೈಕನ್ನು ಓಡಿಸುತ್ತಿದ್ದೆ. ನನ್ನ ಜೊತೆಯಲ್ಲಿದ್ದವರು ಹೀರೋ ಹೊಂಡಾ ಬೈಕನ್ನು ಓಡಿಸಿಕೊಂಡು ಬರುತ್ತಿದ್ದರು. ನಮ್ಮ ದಣಿ ಪಲ್ಸರ್ ಗಾಡಿಯನ್ನು ಓಡಿಸಿಕೊಂಡು ಬರುತ್ತಿದ್ದರು. ಅಪಘಾತಪಡಿಸಿದ ವಾಹನ ಯಾವುದು ಎಂದರೆ ಸ್ವಿಫ್ಟ್ ಕಾರ್ ಆಗಿರುತ್ತದೆ. ಅಪಘಾತಪಡಿಸಿದಾಗ ರಸ್ತೆಯಲ್ಲಿ ಬಿದ್ದಿದ್ದರೋ ಅಥವಾ ರಸ್ತೆಯಲ್ಲಿ ಎಸೆಯಲ್ಪಟ್ಟಿದ್ದೀರಾ ಎಂದರೆ ಸಾಕ್ಷಿ ನಾನು ರಸ್ತೆಯಿಂ 5 ಅಡಿ ದೂರಕ್ಕೆ ಎಸೆಯಲ್ಪಟ್ಟಿರುತ್ತೇನೆ ಎಂದು ಹೇಳುತ್ತಾರೆ. ಆ ಸಮಯದಲ್ಲಿ ನನಗೆ ಪ್ರಜ್ಞೆ ತಪ್ಪಿರುವುದಿಲ್ಲ. ನಿಮ್ಮ ವಾಹನದ ಯಾವ ಬದಿಗೆ ಕಾರು ಗುದ್ದಿರುತ್ತದೆ ಎಂದರೆ ಸಾಕ್ಷಿ ಬೈಕಿನ ಬಲಬದಿಯ ಎದುರು ಟಯರ್ ಭಾಗಕ್ಕೆ ಗುದ್ದಿರುತ್ತದೆ ಎಂದು ಹೇಳುತ್ತಾರೆ. ಕಾರಿನ ಯಾವ ಭಾಗ ಗುದ್ದಿದೆ ಎಂದರೆ ಸಾಕ್ಷಿ ಬಲಭಾಗ ಗುದ್ದಿದೆ ಎಂದು ಹೇಳುತ್ತಾರೆ. ನಾನು ನನ್ನ ಗಾಡಿಯನ್ನು ಒಬ್ಬನೇ ಓಡಿಸಿಕೊಂಡು ಬರುತ್ತಿದ್ದೆ.

2. ಅಪಘಾತವಾದ ನಂತರ ಚಾಸಾ1 ರವರು ಎಷ್ಟು ಸಮಯದ ನಂತರ ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸಾಕ್ಷಿ ನಾವು ಬಿದ್ದ ನಂತರ ಸೆಕೆಂಡ್ ಗಳಲ್ಲಿ ಬಂದಿರುತ್ತಾರೆ ಎಂದು ಹೇಳುತ್ತಾರೆ. ಚಾಸಾ1 ರವರು ಎಲ್ಲಿಗೆ ಹೋಗಲು ಬರುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಚಾಸಾ3 ರವರು ಸಹ ಕೆಲಸ ಬಿಟ್ಟು ಎಲ್ಲಿಗೆ ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಕೆಲಸ ಬಿಟ್ಟು ಬಂದು ಗುರುವಾಯಕೆರೆಯಲ್ಲಿ ಎಷ್ಟು ಸಮಯಗಳ ಕಾಲ ಇದ್ದಿರಿ ಎಂದರೆ ಸಾಕ್ಷಿ ಚಹಾ ಕುಡಿಯಲು 10 ನಿಮಿಷಗಳ ಕಾಲ ಇದ್ದೆವು ಎಂದು ಹೇಳುತ್ತಾರೆ. 7 ಗಂಟೆ ಸಮಯದಲ್ಲಿ ನಾವು ಗುರುವಾಯಕೆರೆಯಲ್ಲಿ ಇದ್ದೆವು ಎಂದರೆ ಸರಿ. ಗುರುವಾಯಕೆರೆಯಿಂದ ಘಟನಾ ಸ್ಥಳಕ್ಕೆ ಅಂದಾಜು ಎಷ್ಟು ದೂರ ಇದೆ ಎಂದರೆ ಗೊತ್ತಿಲ್ಲ. ಅಂದಾಜು 3 ರಿಂದ 4 ಕಿ.ಮೀ ದೂರ ಇದೆ ಎಂದರೆ ಸಾಕ್ಷಿ 3 ಕಿ.ಮೀ ಎಂದು ಹೇಳುತ್ತಾರೆ. ಘಟನೆ ನಡೆದ ಸಮಯ ಸ್ಥಳಕ್ಕೆ ಯಾರೆಲ್ಲಾ ಬಂದಿದ್ದರು ಎಂದು ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ಗೊತ್ತು ಎಂದು ಹೇಳುತ್ತಾರೆ. ಆ ದಿನ ಯಾರೆಲ್ಲಾ ಸೇರಿದ್ದರು ಎಂದರೆ ಸಾಕ್ಷಿ ಚಾಸಾ1, 3 ರವರನ್ನು ಬಿಟ್ಟು ನಮಗೆ ಪರಿಚಯ ಇದ್ದವರು ಇದ್ದರು ಎಂದು ಹೇಳುತ್ತಾರೆ. ಅವರಲ್ಲಿ ಸ್ವಲ್ಪ ಜನಗಳ ಹೆಸರು ಮಾತ್ರ ನನಗೆ ಗೊತ್ತು. ಆ ದಿನ ಯಾರಿಗೆ ಏನೆಲ್ಲಾ ಆಗಿದೆ ಎಂಬ ವಿಚಾರ ಆಸ್ಪತ್ರೆಗೆ ದಾಖಲಾದ ನಂತರ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿ ನನ್ನ ಕಾಲು ಕಟ್ಟಾಗಿರುವುದು ಗೊತ್ತಿತ್ತು ಎಂದು ಹೇಳುತ್ತಾರೆ. ಉಳಿದವರಿಗೆ ಏನೆಲ್ಲಾ ಆಗಿತ್ತು ಎಂದು ಆ ಸಂದರ್ಭದಲ್ಲಿ ಗೊತ್ತಾಗಿರುವುದಿಲ್ಲ. ನನ್ನನ್ನು ಮತ್ತು ಉಳಿದ ಗಾಯಾಳುಗಳನ್ನು ಚಾಸಾ1 ಮತ್ತು 4 ರವರು ಕರೆದುಕೊಂಡು ಹೋಗಿರುತ್ತಾರೆ ಎಂದು ಹೇಳುತ್ತಾರೆ.

3. ಚಾಸಾ1 ರವರ ಬೈಕಿನ ಸಂಖ್ಯೆ ನನಗೆ ಗೊತ್ತಿಲ್ಲ. ಚಾಸಾ3 ರವರು ಓಡಿಸುತ್ತಿದ್ದ ಬೈಕ್ ಸಂಖ್ಯೆ ನನಗೆ ಗೊತ್ತಿಲ್ಲ. ಅಪಘಾತಪಡಿಸಿದ ಕಾರಿನ ಸಂಖ್ಯೆ ಗೊತ್ತಾ ಎಂದರೆ ಹೌದು, ಸಂಃ ಕೆಎ-19-ಎಂ.ಜಿ-584 ಆಗಿರುತ್ತದೆ ಎಂದು ಹೇಳುತ್ತಾರೆ. ಪೊಲೀಸರ ಮುಂದೆ ನೀವು ಯಾರಿಗೆ ಹೇಳಿಕೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ 10 ನೇ ತಾರೀಖಿನಂದು ಆಸ್ಪತ್ರೆಯಲ್ಲಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಆ ಹೇಳಿಕೆಯಲ್ಲಿ ಗಾಯ ಆದ ತಕ್ಷಣ ಪ್ರಜ್ಞೆ ತಪ್ಪಿತ್ತು, ನಂತರ ಎಚ್ಚರಗೊಂಡಾಗ ಎ.ಜೆ ಆಸ್ಪತ್ರೆಯಲ್ಲಿ ಇದ್ದೆ ಎಂದು ಹೇಳಿದ್ದೀರಿ, ಅದು ಸರಿಯಾ ತಪ್ಪಾ ಎಂದರೆ ಸಾಕ್ಷಿ ಸರಿ ಎಂದು ಹೇಳುತ್ತಾರೆ. ಅಪಘಾತವಾದ ನಂತರ ಬೈಕುಗಳ ಅಡ್ಡ ಬಿದ್ದಿದ್ದವು ಎಂದರೆ ಸರಿ. ಬೈಕು ಕೀ ಆನ್ ಆಗಿ ರನ್ನಿಂಗ್ ಕಂಡೀಷನ್‌ನಲ್ಲಿ ಇತ್ತಾ ಅಥವಾ ಆಫ್ ಆಗಿತ್ತಾ ಎಂದರೆ ಸಾಕ್ಷಿ ಬಂದ್ ಆಗಿತ್ತು ಎಂದು ಹೇಳುತ್ತಾರೆ. ಆ ರೀತಿ ಬೈಕುಗಳು ಬಿದ್ದು ಬಂದ್ ಆಗಿದ್ದ ಕಾರಣ ಬೈಕುಗಳ ಲೈಟ್ ಸಹ ಇರಲಿಲ್ಲ, ಆರೋಪಿಯನ್ನು ಗುರುತಿಸಲು ಸಾಧ್ಯವಾಗಿರಲಿಲ್ಲ ಎಂದರೆ ಸಾಕ್ಷಿ ಬೇರೆ ವಾಹನಗಳ ಲೈಟಿನ ಸಹಾಯದಿಂದ ಆರೋಪಿಯನ್ನು ಗುರುತಿಸಿದ್ದೇನೆ ಎಂದು ಹೇಳುತ್ತಾರೆ. ಈ ಘಟನೆಯಿಂದ ಗೊಂದಲವಾಗಿ ವಿಚಾರಗಳನ್ನು ತಿಳಿಯದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಆರೋಪಿಯನ್ನು ನೋಡದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾರೋ ಆರೋಪಿಯ ಹೆಸರನ್ನು ಹೇಳಿದ್ದಾರೆ ಎಂದು ನಾನು ಸಹ ಸತ್ಯವನ್ನು ಮರೆಮಾಚಿ 1 ನೇ ಆರೋಪಿ ಮಾಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಗೂ ಕಾರಿಗೂ ಪ್ರಕರಣಕ್ಕೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ1 ರವರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಅವರ ಕೆಲಸದವರಾದ ಕಾರಣ ನಮಗೆ ಸಹಾಯ ಮಾಡಲು ಅವರು ಸುಳ್ಳು ದೂರು ನೀಡಿದ್ದು, ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ. ವಿ.ಜಿ.ಪಿ ವಕೀಲರಿಂದಃ

ನಾನು ವಿಮಾ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದೇನೆ. ಎಷ್ಟು ಮಂಜೂರಾಗಿದೆ ಎಂದು ಗೊತ್ತಿಲ್ಲ. ಸದರಿ ಹಣ ವಸುಲಾತಿಗಾಗಿ ಅಮಲುಜಾರಿ ಅರ್ಜಿ ಸಲ್ಲಿಸಿದ್ದೇನೆ. ಎಷ್ಟು ಹಣ ವಸುಲಾತಿಗಾಗಿ ಅರ್ಜಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ 20 ಲಕ್ಷ ವಸುಲಾತಿಗಾಗಿ ಅರ್ಜಿ ಸಲ್ಲಿಸಿದ್ದೇನೆ ಎಂದು ಹೇಳುತ್ತಾರೆ. ಘಟನೆಗೂ ನಿಪಿ9 ರಿಂದ 12 ರಲ್ಲಿರುವ ಕಾರಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಘಟನೆಯಾದ ಎಷ್ಟು ಸಮಯದ ನಂತರ ಮೂರ್ಚೆ ತಪ್ಪಿತ್ತು ಎಂದರೆ ಸಾಕ್ಷಿ ಆ ಸಮಯದಲ್ಲಿ ಮೂರ್ಚೆ ಸರಿ ಇತ್ತು ಆಸ್ಪತ್ರೆಗೆ ಹೋದ ನಂತರ ಮೂರ್ಚೆ ತಪ್ಪಿತ್ತು ಎಂದು ಹೇಳುತ್ತಾರೆ. ಹೇಳಿಕೆಯಲ್ಲಿ ಘಟನೆಯಾದ ನಂತರ ಮೂರ್ಚೆ ತಪ್ಪಿತ್ತು ಎಂದು ಹೇಳಿರುವುದು ಸರಿಯಲ್ಲ ಎಂದರೆ ಸಾಕ್ಷಿ ಮತ್ತೆ ತಪ್ಪಿತ್ತು ಎಂದು ಹೇಳುತ್ತಾರೆ. ಮೂರು ಬೈಕಿನವರು ಸಮಾನಂತಾರವಾಗಿ ಬೈಕನ್ನು ಓಡಿಸಿಕೊಂಡು ಬರುತ್ತಿದ್ದೆವು ಎಂದರೆ ಸಾಕ್ಷಿ ಉಳಿದವರು ಹಿಂದೆ ಇದ್ದರು ಎಂದು ಹೇಳುತ್ತಾರೆ. ಮುಂಭಾಗದಲ್ಲಿ ನಾನೇ ಓಡಿಸಿಕೊಂಡು ಹೋಗುತ್ತಿದ್ದೆ ಎಂದು ಹೇಳುತ್ತಾರೆ. ನನ್ನ ಮರುಹೇಳಿಕೆಯನ್ನು ಪೊಲೀಸರು ಎ.ಜೆ ಆಸ್ಪತ್ರೆಯಲ್ಲಿ ಪಡೆದುಕೊಂಡಿರುತ್ತಾರೆ. ಯಾವಾಗ ಪಡೆದುಕೊಂಡಿರುತ್ತಾರೆ ಎಂದರೆ 10 ನೇ ತಾರೀಖಿನಂದು ಪಡೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಘಟನೆಗೂ ಕಾರಿಗೂ ಯಾವುದೇ ಸಂಬಂಧ ಇಲ್ಲದೆ ಇದ್ದರೂ ವಿಮಾ ಪರಿಹಾರಕ್ಕಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು

**(ಸಾ.ಓ.ಹೇ.ಕೇ.ಸ.ಇ.ಎ.ಒ)** ಮತ್ತು ಪ್ರ.ದ.ನ್ಯಾ.ದಂ. ಬೆಳ್ತಂಗಡಿ